





(6ನೇ ಪುಟದಿಂದ)

ನಂತರ ದಿನದಿಂದ ದಿನಕ್ಕೆ ಆ ಮೊಟ್ಟೆಗಳು ಗಾಢ ಬಣ್ಣಕ್ಕೆ ತಿರುಗಿ ಕೊನೆಯಲ್ಲಿ ಕಂದು ಬಣ್ಣವನ್ನು ಪಡೆಯಿತು. ಪತಂಗವು ಮೊಟ್ಟೆ ಇಟ್ಟು 6 ದಿನಗಳು ಕಳೆದ ನಂತರ ಮೊಟ್ಟೆಗಳಿಂದ ಲಾರ್ವಾಗಳು ಹೊರಬರಲಾರಂಭಿಸಿದವು.

ಮಾರನೇ ದಿನ ಆ ಜಾಗದಲ್ಲಿ ಒಂದೇ ಒಂದು ಲಾರ್ವದ ಸುಳಿವೂ ಕೂಡ ಇರಲಿಲ್ಲ. ಟೈಗರ್ ಪತಂಗವೂ ಅಲ್ಲೆಲ್ಲೂ ಕಾಣಸಿಗಲಿಲ್ಲ. ಆದರೆ ಇದಾಗಿ ಸುಮಾರು 4 ತಿಂಗಳು ಕಳೆದ ನಂತರ ಇದೇ ರೀತಿಯ ಮತ್ತೊಂದು ಇಸಾಬೆಲ್ಲಾ ಟೈಗರ್ ಮಾಥ್ ನಮ್ಮ ಮನೆಯಲ್ಲಿ ಅತ್ತಿಂದಿತ್ತ ಹಾರಾಡುತ್ತ ನನ್ನಲ್ಲಿ ಅಚ್ಚರಿ ಮೂಡಿಸಿತು. ಅದು ಅದೇ ಇರಬಹುದೆ...? ಗೊತ್ತಿಲ್ಲ!